CC229/20 CW11.

ಪ್ರ .ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**ಸಿ.ಸಿ.ನಂ.229/2020.**

ದಿನಾಂಕ:**27.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ರಘು | ಚಾಸಾ-11, ಪ್ರಾಸಾ-2 |
| ತಂದೆಯ ಹೆಸರು | ಗಂಗಾಧರಪ್ಪ | |
| ವಯಸ್ಸು | 47 | |
| ಉದ್ಯೋಗ | ವ್ಯವಸಾಯ | |
| ವಾಸ | ಜಿ. ತಿಮ್ಮಾಪುರ ಗ್ರಾಮ | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತವನ್ನು ನಾನು ನೋಡಿರುವುದಿಲ್ಲ. ನಾನು ತಲೆಗೆ ಪೆಟ್ಟು ಬಿದ್ದಿದ್ದಕಾರಣ ಆಸ್ಪತ್ರೆಗೆ ಹೋಗಿದ್ದೆ ಅಷ್ಟೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

ಪಾಟೀಸವಾಲು: ಮಾನ್ಯ ಸ ಸ ಅ ರವರಿಂದ**:-**

ದಿ:22.05.2019 ರಂದು ನಾನು ಮತ್ತು ನನ್ನ ಹೆಂಡತಿ ಚಾಸಾ 13 ರವರು ಕೆ ಎ 66 ಹೆಚ್ 7929 ರ ಬೈಕಿನಲ್ಲಿ ಕಡೂರಿಗೆ ಹೋಗಿ ನಮ್ಮ ಕೆಲಸ ಮುಗಿಸಿಕೊಂಡು ವಾಪಾಸು ಊರಿಗೆ ಹೋಗಲು NH-206 ರ ರಸ್ತೆಯ ಎಡ ಬದಿಯಲ್ಲಿ ಹೋಗುತ್ತಿರುವಾಗ ಜಿ ತಿಮ್ಮಾಪುರ ಗ್ರಾಮದ ಗೇಟ್ ಸಮೀಪ ಮಧ್ಯಾಹ್ನ 2 ಗಂಟೆಗೆ ನಮ್ಮ ಎದುರುಗಡೆಯಿಂದ ಬಂದ ಒಂದು ಕಾರಿನ ಚಾಲಕನ ಅತೀ ವೇಗ ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಡಿಕ್ಕಿ ಪಡಿಸಿದರು ಎಂದರೆ ಸರಿಯಲ್ಲ. ಅಪಘಾತದಿಂದ ನಾನು, ಚಾಸಾ 13 ರವರು ರಸ್ತೆಯ ಮೇಲೆ ಬಿದ್ದೆವು ಎಂದರೆ ಸರಿಯಲ್ಲ. ನಂತರ ಕಾರಿನ ಚಾಲಕನ

ನಿಯಂತ್ರಣ ತಪ್ಪಿ ಎಡಕ್ಕೆ ಎಳೆದುಕುಂಡು ಪಾನಿಪೂರಿ ಗಾಡಿಗೆ ಡಿಕ್ಕಿ ಪಡಿಸಿಕೊಂಡ ಪರಿಣಾಮ ಪಾನಿಪೂರಿ ಮಾರಾಟ ಮಾಡುತ್ತಿದ್ದ ಹುಡುಗನಿಗೆ ಮತ್ತು ಪಾನಿಪೂರಿ ತಿನ್ನುತ್ತಿದ್ದ ಹುಡುಗನಿಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ಸದರಿ ಅಪಘಾತದಿಂದ ನನ್ನ ಬಲ ಮೊಣಕಾಲು, ಬಲ ಕಾಲಿಗೆ ಸಾಮಾನ್ಯ ಗಾಯಗಳಾದವು ಎಂದರೆ ಸರಿಯಲ್ಲ. ಅದೇರೀತಿ ಚಾಸಾ 13 ರವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಪಾನಿ ಪೂರಿ ತಿನ್ನುತ್ತಿದ್ದ ಹುಡುಗನಿಗೆ ತಲೆಗೆ ಮೈಕೈಗೆ ತೀವ್ರ ಗಾಯವಾಗಿತ್ತು ಎಂದರೆ ಸರಿಯಲ್ಲ. ಚಾಸಾ 12 ರವರಿಗೆ ತೊಡೆಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ನಂತರ ಅಪಘಾತ ಪಡಿಸಿದ ಕಾರು ಸಂ.ಕೆ ಎ 44 8717 ಎಂದು ಮತ್ತು ಅದರ ಚಾಲಕ ಗುರುಪ್ರಸಾದ್ ಎಂದು ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಂತರ ಅಲ್ಲಿ ಸೇರಿದ್ದ ಜನರು ಎಲ್ಲಾ ಗಾಯಾಳುಗಳನು ಚಿಕಿತ್ಸೆಗೆ ಕಡೂರಿನ ಸ.ಆಸ್ಪತ್ರೆಗೆ ಕಳುಹಿಸಿದರು ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ದಿನಾಂಕ 08.07.2019 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ಅಲ್ಲಗಳದ ಕಾರಣ, ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಅಪಘಾತದ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹಃ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಎಂ ಜಿ ವಕೀಲರಿಂದಃ ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.